

# ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು

ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಕರಂಗಲಪಾಡಿ, ಮಂಗಳೂರು

## ಶತಮಾನೋತ್ಸವ ಸಂಭ್ರಮ

# ಪ್ರವಾಸ ಕಥನ

ವರದಿ : ಮಂಜುಳಾ ಮುರಳೀಧರ್‌ರಾವ್



ಸ್ನೇಹ, ಸಂಬಂಧ, ಆತ್ಮೀಯತೆ, ಪ್ರೀತಿ ಗಟ್ಟಿಯಾಗಲು ಪರಸ್ಪರ ಸಾಮೀಪ್ಯತೆ ಬೆಳೆಯಲು, ಸಂತೋಷ ಪಡೆಯಲು, ಆನಂದವನ್ನು ಹೊಂದಲು, ಮನಸ್ಸಿನಲ್ಲಿ ಮೂಡುವ ಮರೆಯಲಾಗದ ಕ್ಷಣಗಳಿಗೆ, ಜ್ಞಾಪಕಗಳಿಗೆ, ವಿನೋದ, ವಿಹಾರ, ಪ್ರವಾಸಗಳು ವೇದಿಕೆಯಾಗಿ ಕೆಲಸ ಮಾಡುತ್ತದೆ. ಹೀಗೆ ಸಂತೋಷವಾಗಿ ದಿನವೊಂದನ್ನು ಕಳೆಯುವ ಉದ್ದೇಶದಿಂದ ಶ್ರೀ ಸುಬ್ರಹ್ಮಣ್ಯ ಸಭಾಸದನ ಮಂಗಳೂರು ಇಲ್ಲಿಂದ ಕಾಪು ಜನಾರ್ದನ ಸ್ವಾಮಿ ದೇವಸ್ಥಾನ, ಕುಂಜಾರಿನ ದುರ್ಗಾದೇವಿ ದೇವಸ್ಥಾನ ಹಾಗೂ ಕಾಪು ಬೀಚ್ ಹೌಸ್‌ಗೆ ಒಂದು ದಿನದ ಪ್ರವಾಸವನ್ನು ತಾ.9-3-2008ರಂದು ಆಯೋಜಿಸಲಾಗಿತ್ತು.

ಬೆಳಿಗ್ಗೆ ಸುಮಾರು 8-00 ಗಂಟೆಗೆ ಶ್ರೀ ಸಭಾದಿಂದ ಎರಡು ಬಸ್ಸುಗಳಲ್ಲಿ ಪ್ರಯಾಣ ಹೊರಟ ಬಾಂಧವರ ತಂಡ ಆಬಾಲ ವೃದ್ಧರಿಂದ ಕೂಡಿತ್ತು. ಪ್ರಯಾಣ ಉದ್ದಕ್ಕೂ ಪ್ರಾರ್ಥನೆ, ಸುಪ್ರಭಾತ, ಅಂತ್ಯಾಕ್ಷರಿ, ಹಾಸ್ಯಚಟಾಕಿ, ಭಜನೆ ಹೇಳುತ್ತಾ ಕಾಪು ಜನಾರ್ದನ ಸ್ವಾಮಿಯ ಸನ್ನಿಧಿಗೆ ತಲುಪಿದೆವು. ದೇವರ ದರುಶನವನ್ನು ಪಡೆದ ನಂತರ ಇಡ್ಲಿ, ಸಾಂಬಾರ್, ಚಟ್ನಿ, ಬರ್ಫಿ, ಕರುಣ್‌ರಾವ್ ಬೆಳ್ಳೆಯವರು ತಾವೇ ಮನೆಯಲ್ಲಿ ತಯಾರಿಸಿ ತಂದ ರೊಟ್ಟಿ ಕೊದ್ದು, ಚಹಾ ಕಾಫಿಗಳನ್ನು ಗಡದ್ದಾಗಿ ಸೇವಿಸಿ ನಂತರ ಸುಮಾರು 5 ಸಾವಿರ ವರ್ಷದ ಇತಿಹಾಸವುಳ್ಳ ಪರಶುರಾಮ ದೇವರಿಂದ ಪ್ರತಿಷ್ಠಿತವಾದ ಕುಂಜಾರುಗಿರಿಯ ಶ್ರೀ ದುರ್ಗಾದೇವಿಯ ಸನ್ನಿಧಿಗೆ ತಲುಪಿದೆವು.

ಕುಂಜಾರುಗಿರಿಯ ದುರ್ಗಾಲಯದಲ್ಲಿ ವಿರಾಜಮಾನಳಾದ ದುರ್ಗಾದೇವಿ ನಿಂತಿರುವ ಭಂಗಿಯ ಪ್ರತಿಮೆಯಲ್ಲಿ ಸನ್ನಿಹಿತಳಾಗಿದ್ದು ''ಶಿಷ್ಟರಿಗೆ ತೊಂದರೆ ಕೊಡುವ ದುಷ್ಟರನ್ನು ಸಂಹರಿಸಿ, ಶಿಷ್ಟರ ಇಷ್ಟಗಳನ್ನು ಪೂರೈಸುವುದರಲ್ಲಿ ತಾವು ಸದಾ ಸಿದ್ಧಳು'' ಎಂದು ಸಾರುತ್ತಿರುವಂತೆ ಕಾಣಿಸುವಳು. ಕುಂಜಾರಿನ ದುರ್ಗಾಲಯದ ದಕ್ಷಿಣದ ಮಗ್ಗುಲಲ್ಲಿ ಶ್ರೀ ಪರಶುರಾಮನಿಂದ ಅಧಿಷ್ಠಿತವಾದ ಪರಶುರಾಮಬೆಟ್ಟ ವಿರಾಜಿಸುತ್ತದೆ.

ದುರ್ಗಾಬೆಟ್ಟದ ಪೂರ್ವದಿಕ್ಕಿನಲ್ಲಿ ಪರಶುರಾಮ ನಿರ್ಮಿತವಾದ ಬಾಣತೀರ್ಥ ಇದ್ದರೆ, ಪಶ್ಚಿಮ ದಿಕ್ಕಿನಲ್ಲಿ ಗದಾತೀರ್ಥ ಇದೆ. ಪೂರ್ವ ಬದ್ದಿಯಲ್ಲಿಯೇ ಸ್ವಲ್ಪ ಕೆಳಗೆ ಇರುವ ''ಪರಶುರಾಮ ಗುಹೆ'' ಬಾಣತೀರ್ಥ, ಗದಾತೀರ್ಥಗಳೊಂದಿಗೆ ದುರ್ಗಾಬೆಟ್ಟಕ್ಕೆ ಪರಶುರಾಮನ ಸಂಪರ್ಕವನ್ನು ದೃಢೀಕರಿಸುತ್ತಿದೆ. ದುರ್ಗಾಬೆಟ್ಟದ ಸುತ್ತಲೂ ಹಬ್ಬಿನಿಂತಿರುವ ಹಸಿರು ಕಾನನ. ಅದರ ಮಧ್ಯದ ದೇವಾಲಯದಲ್ಲಿ ಶೋಭಾಯ ಮಾನಗಳಾಗಿ ನಿಂತಿರುವ ದುರ್ಗೆ 'ವನದುರ್ಗೆ' ಎಂದೆನಿಸುವಂತೆ ಮಾಡಿದೆ. ಪ್ರಶಾಂತ ವಾತಾವರಣ, ಸುತ್ತ ಬೆಳೆದ ಗಿಡ ಮರಗಳ ಹಚ್ಚ ಹಸುರು ಕಣ್ಣುಗಳಿಗೆ ಮುದ ನೀಡುತ್ತಿತ್ತು. ಇಂತಹ ವಾತಾವರಣದಲ್ಲಿ ಎಲ್ಲಾ ಬಾಂಧವರು ದೇವಿಯ ದರುಶನವನ್ನು ಪಡೆದು ಪೂಜಾ ಸೇವೆಗಳನ್ನು ನೀಡಿ ದೇವಿಯ ಕೃಪೆಗೆ ಪಾತ್ರರಾದರು. ಬಾಂಧವರೆಲ್ಲರ ಅಪೇಕ್ಷೆಯ ಮೇರೆಗೆ ಶ್ರೀಮತಿ ಜಯಲಕ್ಷ್ಮೀ ಕುಮಾರಿ ಇವರು ದೇವಿಯ ಭಕ್ತಿಗೀತೆಯನ್ನು ತನ್ಮಯತೆಯಿಂದ ಹಾಡಿ ಎಲ್ಲರೂ ತಲೆದೂಗುವಂತೆ ಮಾಡಿದರು.

ದೇವಿ ದರುಶನದಿಂದ ಆನಂದಿತರಾದ ಸಮಾಜ ಬಾಂಧವರ ಪ್ರಯಾಣವು ಮುಂದೆ ಕಾಪು ಬೀಚ್ ಹೌಸ್‌ಗೆ ಸಾಗಿತು. ಎಲ್ಲಿ ನೋಡಿದರೂ ತೆಂಗಿನ ಮರಗಳು, ಹಸಿರು ಬಣ್ಣಗಳಿಂದ ಕೂಡಿದ ದಪ್ಪನೆಯ ಲಾನ್ 'ಪ್ಯಾಲೇಸ್'ನ್ನು ಹೋಲುವಂತೆ ಬೀಚ್ ಹೌಸ್, ಅದರ ಮಗ್ಗುಲಲ್ಲೇ ಸಮುದ್ರರಾಜನ ಆರ್ಭಟವು ಬಾಂಧವರಿಗೆಲ್ಲ ಸಂತೋಷವನ್ನು ನೀಡಿತ್ತು.

(8ನೇ ಪುಟಕ್ಕೆ ...)

## ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಕ್ರೀಡಾಕೂಟ

**20-01-2008 ಆದಿತ್ಯವಾರ**

**ಕೆನರಾ ಹಿರಿಯ ಪ್ರಾಥಮಿಕ ಶಾಲೆ ಮೈದಾನ, ಮಂಗಳೂರು**

### ಸ್ಪರ್ಧಾ ವಿಜೇತರ ವಿವರ

**ಗಂಡಸರು :**

**ಬುಕ್ ಬ್ಯಾಲೆನ್ಸ್**
1) ಪ್ರಕಾಶ್ 2) ಶ್ಯಾಮ್ ಪ್ರಸಾದ್, 3) ಸೋಮಶೇಖರನ್

**ನಡಿಗೆ ಸ್ಪರ್ಧೆ**
1) ಪ್ರಕಾಶ್ 2) ಸತ್ಯಮೂರ್ತಿ 3) ಲಕ್ಷ್ಮೀ ಪ್ರಸಾದ್

**ಶಟಲ್ ಬ್ಯಾಡ್ಮಿಂಟನ್ (ಡಬಲ್ಸ್)**
1) ಅನಿಲ್ ರಾವ್ ಬಿ.ಎಸ್. ಮತ್ತು ಅನಿಲ್ ನೆಲ್ಲಿಕುಂಜ 2) ಪವನ್ ಮತ್ತು ಸಂದೇಶ್

**ಶಟಲ್ ಬ್ಯಾಡ್ಮಿಂಟನ್ (ಸಿಂಗಲ್ಸ್)**
ಅನಿಲ್ ರಾವ್

**ಶೂಟಿಂಗ್ ದ ವಿಕೆಟ್**
1) ರಾಜ್‌ಕುಮಾರ್ 2) ಶುಭಕರ್ 3) ಕಿರಣ್ ಶಾಸ್ತ್ರಿ

**ಕ್ಯಾರಂ (ಹಿರಿಯರು-ಡಬಲ್ಸ್)**
1) ಅನಿಲ್‌ರಾವ್ ಮತ್ತು ಅಶ್ವಿನಿರಾವ್ 2) ಮಾಣೇಶ್‌ರಾವ್ ಮತ್ತು ಬಿ.ವಿ. ಜಯಚಂದ್ರ

**ಕ್ಯಾರಂ (ಸಿಂಗಲ್ಸ್)**
1) ಅನಿಲ್‌ರಾವ್, 2) ಅಶ್ವಿನಿರಾವ್

**ವಾಲಿಬಾಲ್**
1) ಅನಿಲ್ ಮತ್ತು ತಂಡ 2) ರಾಜೇಶ್ ಮತ್ತು ತಂಡ

**ಮಹಿಳೆಯರು (35 ವರ್ಷಕ್ಕಿಂತ ಮೇಲ್ಪಟ್ಟವರು)**

**ರಿಂಗಿಂಗ್ ದ ಸರ್ಕಲ್**
1) ಸೌಭದ್ರ 2) ಮಂಜುಳ ಮುರಳೀಧರ್ 3) ವಿದ್ಯಾ

**ಶಟಲ್ ಬ್ಯಾಡ್ಮಿಂಟನ್ (ಡಬಲ್ಸ್)**
1) ನನ್ಯಾ ಮತ್ತು ವಿದ್ಯಾ 2) ಮಾನಸ ಮತ್ತು ಸಂಧ್ಯಾ

**ಶಟಲ್ ಬ್ಯಾಡ್ಮಿಂಟನ್ (ಸಿಂಗಲ್ಸ್)**
1) ಸೌಮ್ಯಾ ಎಸ್. ರಾವ್ 2) ರಾಜೇಶ್ವರಿ ಶಾಸ್ತ್ರಿ

**50 ಮೀಟರ್ ಓಟ**
1) ಸುಮನ್‌ಕೃಷ್ಣ 2) ಮೋಹಿನಿ 3) ರಾಜೇಶ್ವರಿ

**ಬುಕ್ ಬ್ಯಾಲೆನ್ಸ್**
1) ಗಾಯತ್ರಿ 2) ವಿದ್ಯಾವತಿ 3) ಸಾಧನ

**ತ್ರೋಬಾಲ್**
1) ರಾಜೇಶ್ವರಿ ಮತ್ತು ಬಳಗ 2) ಗಾಯತ್ರಿ ಮತ್ತು ಬಳಗ

**10 ರಿಂದ 16 ವರ್ಷದೊಳಗಿನ ವಿಭಾಗ**

**ಚಮಚದಲ್ಲಿ ಲಿಂಬೆ (ಹುಡುಗಿಯರು)**
1) ನಿಧಿಶ್ರೀ 2) ನಿಖಿತಾ ರಾವ್ 3) ಪವಿತ್ರ ವಿ. ರಾವ್

**ಚಮಚದಲ್ಲಿ ಲಿಂಬೆ (ಹುಡುಗರು)**
1) ಅಭಯ್‌ಚಂದ್ರ 2) ಮಂಜುನಾಥ ಹೆಬ್ಬಾರ್ 3) ಸುದರ್ಶನ್

**50 ಮೀಟರ್ ಓಟ (ಹುಡುಗಿಯರು)**
1) ಸ್ವಾತಿ 2) ನವ್ಯ 3) ಸೌಜನ್ಯ

**50 ಮೀಟರ್ ಓಟ (ಹುಡುಗರು)**
1) ಮಂಜುನಾಥ ಹೆಬ್ಬಾರ್ 2) ಸುದರ್ಶನ್ 3) ಅಭಯ್‌ಚಂದ್ರ

**ಬಟಾಟೆ ರೇಸ್ (ಹುಡುಗಿಯರು)**
1) ನವ್ಯ 2) ಸೌಂದರ್ಯಲಕ್ಷ್ಮಿ 3) ನಂದಿತಾ

**ಬಟಾಟೆ ರೇಸ್ (ಹುಡುಗರು)**
1) ಮಂಜುನಾಥ ಹೆಬ್ಬಾರ್ 2) ನಿಶಾಂತ್ ರಾವ್ 3) ಅಭಯ್‌ಚಂದ್ರ

**ಸೂಜಿಗೆ ನೂಲು (ಹುಡುಗಿಯರು)**
1) ಸೌಜನ್ಯ 2) ಚಂದ್ರಿಕಾ 3) ನಿಧಿಶ್ರೀ

**ಸೂಜಿಗೆ ನೂಲು (ಹುಡುಗರು)**
1) ಸನತ್ 2) ಅಭಯ್‌ಚಂದ್ರ 3) ಅಭಿಷೇಕ್

**ಶಟಲ್ ಬ್ಯಾಡ್ಮಿಂಟನ್**
1) ಸುದರ್ಶನ್ 2) ರೋಹಿತ್ ಕೆ. ರಾವ್

**10 ವರ್ಷಕ್ಕಿಂತ ಕೆಳಗಿನ ವಿಭಾಗ**

**ಚಮಚದಲ್ಲಿ ಲಿಂಬೆ**
1) ಅನನ್ಯ 2) ನಿಧಿ 3) ಮಾನಸ

**ಓಟ**
1) ತೇಜಸ್ಸ್ 2) ಅನನ್ಯ 3) ಶ್ರೀ ವಿದ್ಯಾ

**ಒಂಟಿಕಾಲಿನ ಓಟ**
1) ತೇಜಸ್ಸ್ 2) ವರ್ಷಿಣಿ 3) ಶ್ರೀ ವಿದ್ಯಾ

**35 ವರ್ಷದ ಕೆಳಗಿನ ಮಹಿಳೆಯರು**

**ಓಟ**
1) ಅನುರಾಧ 2) ಶೈಲಜಾ ಶ್ರೀಕಾಂತ್ 3) ಆಶಾ

**ರಿಂಗಿಂಗ್ ದ ಸರ್ಕಲ್**
1) ಸಂಧ್ಯಾ 2) ಅನುರಾಧ 3) ಪ್ರಸನ್ನ

**ಮಕ್ಕಳು : ಕ್ಯಾರಂ ಸಿಂಗಲ್ಸ್**
1) ವಿಹಾರ್ ಜೋಷಿ 2) ಅಭಯ್‌ಚಂದ್ರ

**ಕ್ಯಾರಂ ಡಬಲ್ಸ್**
1) ವಿಹಾರ್ ಜೋಷಿ ಮತ್ತು ಅಭಯ್ ಚಂದ್ರ 2) ಸಿಂಚನ ಮತ್ತು ಪವಿತ್ರ ವಿ. ರಾವ್

**ಚೆಸ್ (16 ವರ್ಷದೊಳಗಿನ)**
1) ವಿಹಾರ್ ಜೋಷಿ
2) ಶೈಲೇಶ್ ಮುಂಡ್ಕೂರು

**16 ವರ್ಷಕ್ಕಿಂತ ಮೇಲೆ**
1) ನಟೇಶ್ ರಾವ್
2) ಎಂ.ಆರ್. ವಾಸುದೇವ


**ಶತಮಾನೋತ್ಸವ ಸಂಭ್ರಮಕ್ಕೆ ಶುಭಕೋರುವ**

**Sharekhan**
Navadurga Share Services
Mangalore-575 101
Prop. : PRADEEP RAO K.
Tel. : 2441318/2412901/02/03/20/21

**RAMA Automobiles**
Mangalore-575 006.
Prop. : U. SANTHOSH KUMAR
Tel. :2454355

**SUMAN PUBLICATIONS**
Mangalore-575 027
SMT. SUMAN KRISHNA
Proprietor

**Vishram Motors (P) Ltd.**
Mangalore-575 003.
ANIL RAO B. S.
Managing Director
Tel. :2440110 (O), 2213946 (R)

**NAVA COMPUTERS**
Mangalore - 5
Prop. : MANISH RAO U.
Mobile : 94487 26499